Sri RAJA PIDNAIK.—Even after a lapse of 4 months, there is no proof regarding the accussed responsible for the offence. Therefore, is it not a lapse on the part of the Local Police ?

Sri D. DEVARAJ URS.—Sometimes there are cases in which investigation goes on not merely for 4 months but even for one year.

(iii) *re* : forcible Collection of money for Police Welfare Fund.

Sri S. BANGARAPPA (Sorab).—I call the attention of the Chief Minister to the inconvenience caused to the public due to forcible collection of money for the Police Welfare Fund.

Sri D. DEVARAJ URS (Chief Minister).—I wish to make the following statement.

The Karnataka State Police Benevolent Fund has been instituted for affording financial and other reliefs to the Non-Gazetted staff of the Police Department and to their dependents. The Government have framed rules for the administration of the Police Benevolent Fund.

The welfare of every subordinate member and his dependents is aimed at by this fund by way of financial help and or otherwise as specified in the rules of the fund. The administration of the fund is vested in the Central Committee constituted for the purpose and the Inspector General of Police is its president. District Committees and Unit Committees have also been constituted for administering the Fund.

The fund is built up by subscriptions paid by the members of the police force, right from the Inspector General of Police to the Constable, by grants sanctioned by the Government and contributions from other sources with the prior sanction of the Government by arranging benefit shows etc., Detailed instructions are contained in the rules for maintaining accounts which are subject to audit.

The resources of the benevolent fund of the City Police Unit are only Rs. 7,15,388 and with this meagre amount, no substantial welfare activity can be undertaken for the welfare of a Police force consisting of 6019 Officers and men, especially Head Constables and Police Constables.

Smt. Hemamalini, a reputed dancer, has generously consented to give a dance performance on 16-3-1975 in aid of the Bangalore City Police Benevolent Fund. It is proposed to bring out a souvenir also on this occasion. Tickets of the denominations of Rs. 1,000, Rs. 500, Rs. 250 and Rs. 100 which are exempted from payment of income tax will be sold. There is no compulsion either in the matter of purchasing the tickets for the performance or for giving advertisements to the souvenir. No complaint of any harassment has been received so far.

Hon'ble Members are aware that the fund is meant for the welfare of our Policemen who are protecting our life and property. Even the Government of India have been kind enough to sanction a sum of Rs. 1,40,000 as grant-in-aid.

Welfare of the subordinate police personel has been the concern of all State Governments as well as the Government of India. Our Government also has been giving atmost importance to the welfare of the low paid members of the force and their families and is doing its best in that direction.

ಶ್ರೀ ಎಸ್. ಬಂಗಾರಪ್ಪ.- ಕರ್ನಾಟಕ ರಾಜ್ಯದ ಪೋಲೀಸು ಇಲಾಖೆಯ ಬೆನವಲೆಂಟು ಫಂಡಿಗಾಗಿ ಸಹಾಯ ಮಾಡಬೇಕೆಂದು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳನ್ನು ಕೇಳುವುದು ಸಹಜ. ಆದರೆ ಇದರ ಬಗ್ಗೆ ಪೋಲೀಸು ಅಧಿಕಾರಿಗಳೇ ಒತ್ತಾಯದಿಂದ ವಸೂಲು ಮಾಡುವುದು ಸರಿಯಲ್ಲ ಎನ್ನುವುದು ಸರಕಾರದ ನೀತಿಯಲ್ಲವೇ ? ಇದನ್ನು ಪೋಲೀಸು ಅಧಿಕಾರಿಗಳು ವಸೂಲು ಮಾಡುವುದಕ್ಕಿಂತ ಇತರರ ಮೂಲಕ ವಸೂಲು ಮಾಡುವುದು ಉಚಿತವಲ್ಲವೇ ? ನೀತಿಯ ಪ್ರಶ್ನೆ ಇದರಲ್ಲಿರುವುದರಿಂದ ಇತರ ಸಂಘ ಸಂಸ್ಥೆಗಳು ಸಹಾಯಕ್ಕಾಗಿ ಪೋಲೀಸು ಅಧಿಕಾರಿಗಳೇ ಇದರ ಬಗ್ಗೆ ವಸೂಲಿ ಮಾಡುವುದು ಸರಿಯಲ್ಲ ಮತ್ತು ಕೆಲವು ಕಡೆಗಳಲ್ಲಿ ಒತ್ತಾಯದಿಂದಲೂ ವಸೂಲು ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಸಾರ್ವತ್ರಿಕವಾಗಿ ವಸೂಲು ಮಾಡುವಾಗ ಯಾವ ವಿಧವಾದ ಒತ್ತಡ ಹಾಕಿ ವಸೂಲು ಮಾಡಬಾರದು ಎಂದು ಸೂಚನೆ ಕೊಡುತ್ತೀರಾ ಮತ್ತು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಜ್ಯದಲ್ಲಿ ಪೋಲೀಸು ಜನ ಯಾವ ರೀತಿ ಇದ್ದಾರೆನ್ನುವುದು ಎಲ್ಲ ಜನರಿಗೂ ಗೊತ್ತು. ಇದರಲ್ಲಿ ವಸೂಲು ಮಾಡುವಾಗ ಇದನ್ನು ಪೋಲೀಸು ಅಧಿಕಾರಿಗಳಿಂದಲೇ ವಸೂಲು ಮಾಡುವುದನ್ನು ನಿಲ್ಲಿಸಿ ಮತ್ತು ತಾವು ಇದರಲ್ಲಿ ಶ್ರೀಮತಿ ಹೇಮಮಾಲಿನಿ ನೃತ್ಯಕ್ಕೆ ಬದಲು ನಮ್ಮ ರಾಜ್ಯದ ಶ್ರೀಮತಿ ವೈಜಯಂತಿಮಾಲಾರವರ ನೃತ್ಯಕ್ಕೆ ಅವಕಾಶ ಕೊಡಬಹುದಿತ್ತಲ್ಲವೇ ?

ಶ್ರೀ ಟಿ. ಆರ್. ಶಾಮಣ್ಣ.—ಪೋಲೀಸು ಇಲಾಖೆಯಲ್ಲಿರುವ ಕೆಳದರ್ಜೆ ನೌಕರರುಗಳಿಗೆ ಸಹಾಯವನ್ನು ಅಗತ್ಯವಾಗಿ ಮಾಡಬೇಕು. ಇಲ್ಲಿ ಪ್ರಸ್ತಾಪ ಮಾಡಿರುವುದರ ಉದ್ದೇಶ ರಾಜ್ಯಗಳಲ್ಲಿರುವ ಅನೇಕ ದೊಡ್ಡ ಹೊಟೇಲುಗಳಿಂದ, ಕ್ಲಬ್ಬುಗಳಿಂದ ಒತ್ತಾಯಪೂರ್ವಕವಾಗಿ ಪೋಲೀಸು ಅಧಿಕಾರಿಗಳು ವಸೂಲು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ? ಕಾಕ್‌ಜೇರ್ ಪಾರ್ಟಿಗಳು ಹಾಗೂ ಇನ್ನಿತರ ಪಾರ್ಟಿಗಳಲ್ಲಿ ಪೋಲೀಸರು ಬೇಕಾದಹಾಗೆ ಹಣವನ್ನು ವಸೂಲು ಮಾಡುತ್ತಿಲ್ಲವೇ ? ಇವುಗಳಿಂದ ಬರುವ ಹಣವನ್ನು ಸರಿಯಾಗಿ ಉಪಯೋಗಿಸದೆ ದುರ್ಬಳಿಯೋಗ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ? ಒತ್ತಾಯಪೂರ್ವಕವಾಗಿ ಹಣ ವಸೂಲು ಮಾಡುವುದನ್ನು ನಿಲ್ಲಿಸಲು ಸೂಕ್ತವಾದ ಕಾರ್ಯಕ್ರಮ ಸರಕಾರ ಹಾಕಿಕೊಳ್ಳುತ್ತಾರೆಯೆ ?

ಶ್ರೀ ಡಿ. ದೇವರಾಜ ಅರಸ್.—ಹಣ ದುರುಪಯೋಗವಾಗುತ್ತಿದೆ ಎನ್ನುವುದರ ಬಗ್ಗೆ ನಾನು ಈಗಾಗಲೇ ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ಯಾವುದನ್ನು ಮಾಡಬೇಕಾದರೂ ಕಾನೂನು ಪ್ರಕಾರ ನಡೆಯಬೇಕಾಗುತ್ತದೆ ಇಷ್ಟೊಂದು ಹಣ ಬರುವಾಗ ಇದು ದುರುಪಯೋಗವಾಗುತ್ತಿದೆ ಎಂದು ಹೇಳುವುದು ಸರಿಯಲ್ಲ. ನನ್ನ ಹೇಳಿಕೆಯಲ್ಲಿರುವಂತೆ ಈಗಾಗಲೇ ಸುಮಾರು ಏಳು ಲಕ್ಷದಷ್ಟು ವಸೂಲು ಮಾಡಿದ್ದಾರೆ. ಇದರಲ್ಲಿ ದುರುಪಯೋಗವಾಗುತ್ತಿದೆ ಎನ್ನುವುದನ್ನು ಯಾರೂ ಒಪ್ಪಿಕೊಳ್ಳಲಾಗುವುದಿಲ್ಲ. ನಮ್ಮ ಮಾನ್ಯ ಶ್ರೀ ಲಿಂಗಪ್ಪನವರಿಗೆ ತಿಳಿದಿರುವಂತೆ ಎಲ್ಲರಿಗೂ ಪೋಲೀಸರ ಸಹಾಯ ಬೇಕಾಗುತ್ತದೆ. ಆದರೆ ನಮ್ಮ ಶ್ರೀ ಲಿಂಗಪ್ಪನವರಿಗೆ ಎಲ್ಲರೂ ಕೆಟ್ಟವರು ದೇಶವೇ ಹಾಳಾಗಿ ಹೋಗಿದೆ ಎಂದರೆ ಅವರ ಕಣ್ಣು ಆರಿಸಿನ ಬಣ್ಣಕ್ಕೆ ತಿರುಗಿರಬಹುದು ಎಂದು ತೋರುತ್ತೆ.

ಶ್ರೀ ಕೋಣಂದೂರು ಲಿಂಗಪ್ಪ.—ಕೆಲವೇ ಜನ ಇರುವುದು ಏನು ಮಾಡುವುದು ?

ಶ್ರೀ ಡಿ. ದೇವರಾಜ ಅರಸ್.—ನೀವು ಸೃಷ್ಟಿಕರ್ತರಾಗಿದ್ದರೆ, ಎಲ್ಲರನ್ನೂ ಪ್ರಾಮಾಣಿಕರನ್ನಾಗಿ ಮಾಡುತ್ತಿದ್ದೀರಾ ? ಸೃಷ್ಟಿಕರ್ತ ಮಾಡಿರುವುದರಲ್ಲಿ ನೀವೂ ಒಬ್ಬರು. ಎಲ್ಲ ಕೆಟ್ಟು

ಹೋಗಿದೆ ಎಂದು ಜನರಲೈಸ್ ಮಾಡಿ ಹೇಳುವುದು ಸರಿಯಲ್ಲ. ಹೇಮಮಾಲಿನಿ, ನೈಜಯಂತಿಮಾಲ ಹೆಸರು ಹೇಳಿದ ಕೂಡಲೇ ಬಾಯಿನಲ್ಲಿ ನೀರ ಬಂದಹಾಗೆ ಕಾಣುತ್ತದೆ. ನೀರಸವಂತರು ಎಂದು ತಿಳಿದುಕೊಂಡಿದ್ದೆ, ಈಗ ಅರ್ಥವಾಯಿತು ರಸಿಕತ್ವ ಇದೆ ಎಂದು.

ಶ್ರೀ ಎಸ್. ಬಂಗಾರಪ್ಪ.—ಕೆಲವು ಸಾರಿ ಹುಣಿಸೆ ವರ ಹಳೆಯದಾದರೂ ಹುಳಿ ಜಾಸ್ತಿ ಇರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅವರ ವಿಚಾರ ಮಾತನಾಡುವುದು ಸರಿಯಲ್ಲ. ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡು ಬಂದಿದ್ದಾರೆ. ತಾವು ಹೇಳಿದಹಾಗೆ ಹಿಂಸೆ ಮಾಡುತ್ತಿದ್ದಾರೆ...

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಒಬ್ಬ ಸಬ್ ಇನ್ಸ್‌ಪೆಕ್ಟರ್ ಎರಡು ಲಕ್ಷ ರೂಪಾಯಿ ವಸೂಲಿ ಮಾಡಬೇಕು ಎಂದು ಈ ಪ್ರಕಾರ ನಿಗದಿ ಮಾಡಿದ್ದಾರೆ.

Sri D. DEVARAJ URS.—There are all wild charges ; I refute them. If there is any specific charges against any particular officer, certainly we take action. This fund is there for a long number of years. The Police constables have to work under great stress and strain and discharge their duties. ಅಲ್ಪ ಸ್ವಲ್ಪ ಸಹಾಯ ಆಗಲೀ ಅನ್ನುವುದು ಸರ್ಕಾರದ ಉದ್ದೇಶ. I will be very happy to receive any information from you regarding the mis-use of power or position.

ಶ್ರೀ ಟಿ. ಆರ್. ಶ್ಯಾಮಣ್ಣ.—ವಾಲಂಟರಿಯಾಗಿ ತೆಗೆದುಕೊಂಡಿಲ್ಲ. ಒತ್ತಾಯದಿಂದ ತೆಗೆದುಕೊಂಡಿದ್ದವರ ಹತ್ತಿರ ಬರೆಸಿಕೂಂಡು ಬರಲೆ.

ಶ್ರೀ ಡಿ. ದೇವರಾಜ ಅರಸ್.—ಬರೆಸಿಕೊಂಡು ಬನ್ನಿ.

Third Report of the Committee in Reserovations for SCs/STs in Public Undertakings etc.

Presentation

Smt. SHEILA IRANI (Nominated).—Sir, as Chairman of the Committee on the Welfare of Scheduled Castes and Scheduled Tribes of Karnataka Legislature, having been authorised by the Committee, I beg to present the III Report on the reservations for Scheduled Castes and Scheduled Tribes in Public Undertakings, Departmental Undertakings and Statutory Bodies.

Mr. DEPUTY SPEAKER.—The report is presented. Now Financial Business.

Urging the Government for laying on the Table the Records pertaining to M/s Nirmala Engineering Company

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಸಭೆಯಲ್ಲಿ ನಿರ್ಮಲ ಇಂಜಿನಿಯರಿಂಗ್ ಕಂಪನಿ ವಿಚಾರ ಚರ್ಚೆ ಮಾಡುತ್ತಾ ಇದ್ದಾಗ ಸ್ಪೀಕರ್‌ರವರು, ತಮಿಳುನಾಡು ಸ್ಪೀಕರ್‌ರವರು ಬಂದಿದ್ದಾರೆ ಟೀಗೆ ಬರಬೇಕು ಎಂದು ಹೇಳಿದ್ದಕ್ಕೆ ನಾವು ಹೋಗಿದ್ದೆವು. ನಿರ್ಮಲ ಇಂಜಿನಿಯರಿಂಗ್ ಕಂಪನಿ ಬಗ್ಗೆ ಪ್ರಸ್ತಾಪ ಮಾಡುವಾಗ, ಮಾನ್ಯ ಮಂತ್ರಿಗಳು ಮುಗ್ಧಂ ಮೇಲೆ ಯಾವುದಾದರೂ ಪತ್ರ ಬರೆದಿದ್ದು ಓದಿ, ಯಾವಾಗ ಬೇಕಾದರೂ ಹೇಳಿ ಎಂದು ನಿನ್ನೆ ತಿಳಿಸಿದರು. This is a letter addressed to Sri Veerendra Patil on 29th March 1970.